197

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ಜಿನ್ಸಿ ಹೆಸರು.	ಜೋಡಿ ಮತ್ತು ತಪ್ಸೀಲ್.	ವಿಸ್ತೀರ್ಣ.	ಸರಕಾರಕ್ಕೆ ಬರತಕ್ಕ ಜೋಡಿ ಸೊಲಗ.	ಸರಕಾರಕ್ಕೆ ಬರಬೇಕಾದ ಬಾಕಿ ಸೊಲಗ.	ಹರಾಜು ಆಗುವುದು.	ಷರಾ.
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಲ್ಲುಗಳೆ.	ರಾಮಯ್ಯನ ಹೆಂಡತಿ ಸೀತಮ್ಮ	ವೃತ್ತಿ I	ಜೋಡಿ	..	8 8 3	20 13 8	ಹರಾಜು ಆದೀತು 1896ನೇ ಇಸವಿ ಜುಲೈ 27ರಲ್ಲಿ ಜೋಡಿ ರೂಪಾಯಿ 8—8—3	

ತಾಕು I ಖುಷ್ಕಿ 3 ಕೊಳಗ.
ಪೂರ್ವಕ್ಕೆ—ನಂಜಪ್ಪನ ಜಮೀನು
ಪಶ್ಚಿಮಕ್ಕೆ—ಮುನಿಶಾಮಿಗ ಜಮೀನು
ಉತ್ತರಕ್ಕೆ—ಗಂಗಾಧರಯ್ಯನ ಜಮೀನು
ದಕ್ಷಿಣಕ್ಕೆ—ಅಪ್ಪೂರಾಯಪ್ಪನ ಜಮೀನು

ತಾಕು II ಖುಷ್ಕಿ ಕೊಳಗ 3.
ಪೂರ್ವಕ್ಕೆ—ಅಪ್ಪೂರಾಯಪ್ಪನ ಜಮೀನು
ಪಶ್ಚಿಮಕ್ಕೆ—ಕೊಮಾರಯ್ಯನ ಜಮೀನು
ಉತ್ತರಕ್ಕೆ—ಅಪ್ಪೂರಾಯಪ್ಪನ ಜಮೀನು
ದಕ್ಷಿಣಕ್ಕೆ—ಜಾರಕಬಂಡೆ

ತಾಕು III ತರೀ 12 ಕೊಳಗ.
ಪೂರ್ವಕ್ಕೆ—ಅಮಾನೀ ಹುಪ್ಪಿನ ಅಣಿಕೆರೆ
ಪಶ್ಚಿಮಕ್ಕೆ—ನೀರಗಂಟಿ ಇನಾಂತಿ, ರಾಮಚಂದ್ರಯ್ಯನ ಜಮೀನು
ಉತ್ತರಕ್ಕೆ—ರಾಮಾಪಂಡಿತ ವೈರೇರ ಜಮೀನು
ದಕ್ಷಿಣಕ್ಕೆ—ನಾರಿವಾಳ

ತಾಕು IV ಖುಷ್ಕಿ ಪಡಿ 2.
ಪೂರ್ವಕ್ಕೆ—ಕಾಮರಾಯರ ಕಣ್ಣ, ಕೃಷ್ಣರಾಜಪುರದ ದಾರಿ
ಪಶ್ಚಿಮಕ್ಕೆ—ದಂಡಿನ ದಾರಿ
ಉತ್ತರಕ್ಕೆ—ನಿಲುಕಲ್ಲು
ದಕ್ಷಿಣಕ್ಕೆ—ಶಾಮರಾಯರ ಕಣ ಮತ್ತು ನಂಜಪ್ಪನ ಕಣ

ತಾಕು V ವಠಾರ.
ಪೂರ್ವಕ್ಕೆ—ಹಜಾಮರ ಮನೆ
ಪಶ್ಚಿಮಕ್ಕೆ—ಗಂಗಾಧರಯ್ಯ, ಸೀತಾರಾಮಯ್ಯನ ವಠಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಜೇಲಿ

ತಾಕು VI
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲ್ಲೆ
ಉತ್ತರಕ್ಕೆ—ಬಿಳೇಸ್ವರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿನ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾವಾ ಪಯಿ ಪೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

ಕೆ. ಶ್ರೀನಿವಾಸರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 1ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟ್ ನೆಲವಂಗಲದ ತಾಲ್ಲೂಕು ಗ್ರಾಮಾಂತ್ರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿಸಂವತ್ಸರದ ಬಾಬನ್ನು, 1896ನೇ ಇಸವಿ ಆಗಸ್ಟು ತಾರೀಖು 10ರಲ್ಲಿ ಹರಾಜ್ ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಮಾಡಿ ಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಬಂದು ವರುಷದ ವರಿಗೆ ಇರತಕ್ಕದ್ದು.

(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ವಿಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ವಿಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ಪಡಿಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ಪಡಿಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ 1 ಆಣೇ ಮೇರೆ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಿಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(8) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರನು ಅಗಿಯುಕೂಡದು. ಬಂದು ಬೇಳೆ ಆಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪ ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಶೀಲ್ ಕಂಡು ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ವಿ. ಎಸ್. ನರಸುಂಹಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಇ ಸ್ತಿ ಹಾ ರ್ ನಾ ಮೆ.

ಬವರಿಂಗ್‌ಪೇಟೆ ತಾಲ್ಲೂಕು ಕಚೇರಿಯಿಂದ.

ತಾರೀಖು 10ನೇ ಜೂ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಇದರಡಿ ಕಂಡ ಬವರಿಂಗ್‌ಪೇಟೆ ತಾಲ್ಲೂಕಿನ ಗ್ರಾಮಗಳ ಬೇಯುಣ ಬಂಜರು ಜಮೀನಿನ ಬಂಡೆಗಳಲ್ಲಿ ಕೊಯಿದು ಸಾಗಿಸುವ ಬಗ್ಗೆ ಸ್ಯ 1896ನೇ ಇಸವಿ ಜುಲೈ 2ನೇ ತಾರೀಖು ದಿವಿ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆ.

2. ಈ ಹರಾಜ್ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ ಯಾ ಶಿರಸ್ತೇದಾರ್ರ ಸಮಕ್ಷಮ ಜರಗಲ್ಪಡುವದು.

3. ಇದು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಿಗೆ ವಳಪಟ್ಟು ಇರತಕ್ಕದ್ದು.

4. ಸ್ಯ 1897ನೇ ಇಸವಿ ಜೂ ಮಾಹೆ ವರಿಗೆ ಅವಧಿ ಕೊಟ್ಟು ಇದೆ.

5. ಹರಾಜಿನಲ್ಲಿ ಪಡೆಯುವನು ಹರಾಜ್ ಕಾಲದಲ್ಲಿ ಕೇಕಡಾ 25 ರೂಪಾಯಿನ ಮೇರಿಗೆ ಡಿಪಾಜಿಟ್ ಇಟ್ಟು ನಿಂತ ಹಣ ಸರಿಯಾದ ಕಾಲದಲ್ಲಿ ಅಂದರೆ ಹರಾಜ್ ಕಾಯಂ ಆದ ಸಂಗತಿ ತಿಳಿದ 7 ದಿವಸದ ವಳಗಾಗಿ ಲೋಕಲ್‌ಸೆಸ್ ವಗ್ಯೆರೆ ವಿಶಿಷ್ಟವೂ ಕೊಡದೆ ತಪ್ಪಿದರೆ ಡಿಪಾಜಿಟ್ ಹಣ ಸರ್ಕಾರಕ್ಕೆ ಶೇರಿಸಿಕೊಂಡು 2ನೇ ಹರಾಜ್ ಮಾಡಲ್ಪಡುತ್ತೆ.

6. ಕರಾರು.

ಎ. ಹರಾಜ್‌ದಾರ್ ಹುಲ್ಲುಬನ್ನಿ ದನಗಳು ಮೇಯಿಸುವ ಸ್ಥಳದಲ್ಲಿ ಹೋಗಕೂಡದು.
ಬಿ. ಸರ್ಕಾರ್ರ ಬಂಜರ್ ಜಮೀನಿನ ಬಂಡೆಗಳನ್ನ ತೆಗದುಕೊಳ್ಳ ಬಹುದು.
ಸಿ. ರೈತರು ತಮ್ಮ ಸ್ವಂತ ಜಿರಾಯಿತು ವಗ್ಯೆರೆ ಕಟ್ಟಣಗಳಿಗೆ ಉಪಯೋಗಿಸುವ ಬಂಡೆಗಳಲ್ಲಿ ಪ್ರವೇಶಿಸಕೂಡದು.
ಡಿ. ಸರ್ಕಾರ್ ಕೆಲಸಗಳಿಗೋಸ್ಕರ ಬಂಡೆಗಳನ್ನ ಮುಫತ್ತಾಗಿ ಕೊಡಬೇಕು.
ಇ. ಹರಾಜ್‌ದಾರನು ಬಂಡೆ ತೆಗೆಯುವದರ ಮೂಲಕ ಜಮೀನ್ ಸಾಗುವಳಿಗೆ ಉಪಯೋಗವಿಲ್ಲದಂತೆ ಮಾಡಕೂಡದು.